**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪ್ರಾ ಸಾ-1 ರವರನ್ನು ಪುನಃ ಕರೆಸಲಾಯಿತು ಹಾಗು ಪಾಟೀ ಸವಾಲು ಮಾಡಲು ಅನುಮತಿಸಲಾಯಿತು. ಸಾಕ್ಷಿಯನ್ನು ದಿನಾಂಕ 10-02-2021 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಎಸ್ ವಿ ವಕೀಲರಿಂದಃ**

ಬಿಡ್ ಮಾಡುವ ಪೂರ್ವದಲ್ಲಿ ನಾವು ಬಿಡ್ ತೆಗೆದುಕೊಳ್ಳುವವರಿಂದ ಯಾವುದೇ ದಾಖಲೆಗಳನ್ನು ಪಡೆದುಕೊಳ್ಳುವುದಿಲ್ಲ. ಬಿಡ್ ನಲ್ಲಿ ಪಾಲ್ಗೊಳ್ಳಲು ಚಿಟ್ ನ ಪ್ರಿಮಿಯಂಗಳನ್ನು ಸರಿಯಾಗಿ ಕ್ರಮಬದ್ಧವಾಗಿ ಕಟ್ಟಿರಬೇಕು ಬಿಡ್ ಮಾಡುವವರನ್ನು ರಿಜಿಸ್ಟರ್ ನಲ್ಲಿ ದಾಖಲು ಮಾಡಿಕೊಳ್ಳಲಾಗುತ್ತದೆ. ಬಿಡ್ ಆದ ನಂತರ ಬಿಡ್ ನಲ್ಲಿ ಆದಾ ಸಂಪೂರ್ಣ ವ್ಯವಹರಣೆಗಳನ್ನು ರಿಜಿಸ್ಟರ್ ನಲ್ಲಿ ಬೆರಯುತ್ತೇವ ಎಂದರೆ ಸರಿ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಇನ್ನು ಕೊಟ್ಟಿಲ್ಲ. ಆರೋಪಿ 50 ಲಕ್ಷ ಚೀಟಿಯನ್ನು ಎತ್ತಿಕೊಂಡಿದ್ದರು 34 ಕಂತು ಮರುಪಾವತಿ ಮಾಡಿದ್ದಾರೆ ಬಾಕಿ 16 ಕಂತು ಇರುತ್ತದೆ. ಉಳಿದ 5 ಲಕ್ಷ ದ ಚೀಟಿಯಲ್ಲಿ 22 ಕಂತುಗಳನ್ನು ಆರೋಪಿ ಕಟ್ಟಿದ್ದಾರೆ. ನಾವು ಕಚೇರಿಯಿಂದ ಕಳುಹಿಸಿದ್ದ 32 ನೋಟೀಸ್ 50 ಲಕ್ಷದ ಚೀಟಿಯಲ್ಲಿ ಆರೋಪಿಗೆ ಖುದ್ದು ಜಾರಿಯಾಗಿದೆ. ಉಳಿದ ತಲಾ 5 ಲಕ್ಷದ ಚೀಟಿಯಲ್ಲಿ 32 ನೋಟೀಸ್ ಜಾರಿಯಾಗಿಲ್ಲ. ಎಲ್ಲಾ ಪ್ರಕರಣಗಳಲ್ಲೂ 33 ನೋಟೀಸ್ ಆರೋಪಿಯೇ ಖುದ್ದಾಗಿ ಸ್ವೀಕರಿಸಿ ಸ್ವೀಕೃತಿ ಕೊಟ್ಟಿದ್ದಾರೆ. 32 ಮತ್ತು 33 ನೋಟೀಸ್ ನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ. ಆರೋಪಿ ಹಣ ಕಟ್ಟಿಲ್ಲ ಎಂದು ಪಿರ್ಯಾದುದಾರರ ಕಂಪನಿಯ ರಿಜಿಸ್ಟರ್ ರವರಿಗೆ ನೋಟೀಸ್ ಕೊಟ್ಟಿದ್ದೀರಾ ಎಂದರೆ ಆ ರೀತಿಯ ಪ್ರಕ್ರಿಯೆ ಇಲ್ಲ ಎಂದು ಹೇಳುತ್ತಾರೆ ಬಿಡ್ ಆದ ನಂತರ ಸೆಕ್ಯುರಿಟಿ ಉದ್ದೇಶಕ್ಕಾಗಿ ಸ್ವತ್ತು ಮತ್ತು ಚೆಕ್ ನ್ನು ಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿ ಸ್ವತಃ ಚೆಕ್ಕನ್ನು ಪ್ರಿಮಿಯಂ ಹಣ ತುಂಬಲು ದಿನಾಂಕ ತಿಂಗಳು ವರ್ಷವನ್ನು ಬರೆದು ಮೊತ್ತವನ್ನು ಖಾಲಿ ಬಿಟ್ಟು ಕೊಡುತ್ತಾರೆ ಎಂದು ಹೇಳುತ್ತಾರೆ. ವಿವಾದಿತ ಚೆಕ್ಕನ್ನು

ನಾವು ನೋಟೀಸ್ ಕೊಟ್ಟಾಗ ಆರೋಪಿ ಕೊಟ್ಟಿದ್ದಾರೆ ಎಂದು ಸಾಕ್ಷಿಗೆ ಚೆಕ್ಕನ್ನು ತೋರಿಸಿದಾಗ ಸ್ವತಃ ಹೇಳಿರುತ್ತಾರೆ. ವಿವಾದಿತ ಚೆಕ್ಕಿನಲ್ಲಿ ಮೊತ್ತ ಮತ್ತು ಹೆಸರನ್ನು ನಾವೇ ಬರೆದಕೊಂಡಿದ್ದೇವೆ ಎಂದರೆ ಸರಿಯಲ್ಲ. ವಿವಾದಿತ ಚೆಕ್ಕುಗಳ ಮೇಲಿನ ಮೊತ್ತ ಮತ್ತುಹೆಸರನ್ನು ನಾವೇ ಬರೆದುಕೊಂಡು ನಮ್ಮ ಕಂಪನಿಯ ಮೊಹರನ್ನು ಹಾಕಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಕೊಟ್ಟಿದ್ದಂತಹ ಸೆಕ್ಯುರಿಟಿ ಉದ್ದೇಶಕ್ಕಾಗಿ ಕೊಟ್ಟಿದ್ದ ಚೆಕ್ಕನ್ನು ದುರುಪಯೋಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೆ ಯಾವುದೇ ನೋಟೀಸ್ ಕೊಟ್ಟಿಲ್ಲ ಎಂದರ ಸರಿಯಲ್ಲ. ಆರೋಪಿ ಯಾವುದೇ ಬಿಡ್ ಮೊತ್ತ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಕಂಪನಿಗೆ ಪಾವತಿಸಿರುವ ಹಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯೊಂದಿಗೆ ಆಗಿರುವ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿಯ ಹಾಜರುಪಡಿಸುವುದಾಗಿ ಹೇಳುತ್ತಾರೆ. ಆರೋಪಿ ಬಿಡ್ ನಲ್ಲಿ ಪಾಲ್ಗೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಬಿಡ್ ಮೊತ್ತ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿವಾದಿತ ಚೆಕ್ಕುಗಳನ್ನು ಸಾಲಕ್ಕಾಗಿ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಚೀಟಿಯ ಎಲ್ಲಾ ಕಂತುಗಳನ್ನು ಕಟ್ಟಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

24 ನೇ ಎ ಎಸ್ ಸಿ ಜೆ ಮತ್ತು ಎ ಸಿ ಎಂ ಎಂ
ಬೆಂಗಳೂರು.